ದಿನಾಂಕ 13.12.2024 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.

ಮುಂದುವೆರದ ಮುಖ್ಯ ವಿಚಾರಣೆ – 3 ನೇ ಎದುರುದಾರರ ಪರವಾಗಿ ಶ್ರೀ.ಎಂ ಬಿ ಆರ್ ವಕೀಲರಿಂದ –

30. ಭೂದಾಖಲೆಗಳ ಉಪ ನಿರ್ದೇಶಕ ರವರ ನ್ಯಾಯಾಲಯದ ಮುಂದೆ ಸಲ್ಲಿಸಿರುವ ಮೇಲ್ಮನವಿಗೆ ಸಂಬಂಧಿಸಿದ ದಾಖಲೆಗಳನ್ನು ಹಾಜರು ಪಡಿಸಲಾಗಿದೆ. ಮೇಲ್ಮನವಿಯನ್ನು ನಿಆರ್–42 ಎಂದು ಮತ್ತು ಕಾಲ ವಿಳಂಬವನ್ನು ಮನ್ನಿಸಬೇಕು ಎಂದು ಹಾಕಿರುವ ಅರ್ಜಿಯನ್ನು ನಿಆರ್–43 ಎಂದು ಮತ್ತು ಸದರಿ ಮೇಲ್ಮನವಿ ಸಂಖ್ಯೆ 135/2017–18 ಪ್ರಕರಣದ ಅದೇಶದ ಹಾಳೆಯನ್ನು ನಿಆರ್–44 ಎಂದು ಮತ್ತು ಸದರಿ ಪ್ರಕರಣದಲ್ಲಿ ಆಗಿರುವಂತಹ ತೀರ್ಮಾನವನ್ನು ನಿಆರ್–45 ಎಂದು ಗುರುತಿಸಿದೆ.

31. ಮೇಲ್ಮನವಿ ಸಂಖ್ಯೆ 282/2021–22 ಪ್ರಕರಣದ ಅದೇಶದ ಹಾಳೆಯನ್ನು ನಿಆರ್–46 ಎಂದು ಮತ್ತು ಅದೇ ಪ್ರಕರಣದಲ್ಲಿ ಆಗಿರುವ ತೀರ್ಪನ್ನು ನಿಆರ್–47 ಎಂದು ಗುರುತಿಸಿದೆ.

32. ಸದರಿ ಮೇಲ್ಮನವಿ ಸಂಖ್ಯೆ 282/2021–22 ಪ್ರಕರಣದಲ್ಲಿ ಸಲ್ಲಿಸಿರುವ ಲಿಖಿತ ತಕರಾರನ್ನು ನಿಆರ್–48 ಎಂದು ಗುರುತಿಸಿದೆ. ಜಿಲ್ಲಾಧಿಕಾರಿಗಳ ತಾಂತ್ರಿಕ ಸಹಾಯಕರು ಮತ್ತು ಪದನಿಮಿತ್ತ ಭೂದಾಖಲೆಗಳ ನ್ಯಾಯಾಲಯದಲ್ಲಿ ಸಲ್ಲಿಸಿರುವ ಮೇಲ್ಮನವಿಯನ್ನು ನಿಆರ್–49 ಎಂದು ಮತ್ತು ಅದೇ ಪ್ರಕರಣದಲ್ಲಿ ಸಲ್ಲಿಸಿರುವ ಕಾಲಮಿತಿಯನ್ನು ಮನ್ನಿಸಬೇಕು ಎಂದು ಹಾಕಿರುವ ಅರ್ಜಿಯನ್ನು ನಿಆರ್–50 ಎಂದು ಗುರುತಿಸಿದೆ. ಅದೇ ಪ್ರಕರಣದಲ್ಲಿ ಸಲ್ಲಿಸಿರುವ ಮತ್ತೊಂದು ಮಧ್ಯಂತರ ಅರ್ಜಿಯನ್ನು ನಿಆರ್–51 ಎಂದು ಗುರುತಿಸಿದೆ.

33. ಪ್ರಾದೇಶಿಕ ಭೂದಾಖಲೆಗಳ ಜಂಟಿ ನಿರ್ದೇಶಕರ ನ್ಯಾಯಾಲಯದಲ್ಲಿ ಆಗಿರುವಂತಹ ಆಜ್ಞೆಯನ್ನು ನಿಆರ್–52 ಎಂದು ಮತ್ತು ಅದೇ ನ್ಯಾಯಾಲಯದ ಅದೇ ಪ್ರಕರಣಕ್ಕೆ ಸಂಬಂಧಿಸಿದ ಆದೇಶದ ಹಾಳೆಯನ್ನು ನಿಆರ್–53 ಎಂದು ಗುರುತಿಸಿದೆ. ಮೇಲ್ಮನವಿ ಸಂಖ್ಯೆ 28/2023 ರಲ್ಲಿ ಆಗಿರುವ ಅದೇಶವನ್ನು ನಿಆರ್–54 ಎಂದು ಮತ್ತು ಅದೇ ಪ್ರಕರಣದಲ್ಲಿ ಸಲ್ಲಿಸಿರುವ ಲಿಖಿತ ವಾದವನ್ನು ನಿಆರ್–55 ಎಂದು ಗುರುತಿಸಿದೆ.

34. ನೋಟೀಸನ್ನು ನಿಆರ್–56 ಎಂದು ಗುರುತಿಸಿದೆ. ಒಂದು ಹೇಳಿಕೆಯನ್ನು ನಿಆರ್–57 ಎಂದು ಗುರುತಿಸಿದೆ. ಪಕ್ಕಾ ಬುಕ್ಕು ದಾಖಲೆಯನ್ನು ನಿಆರ್–58 ಎಂದು

ಮತ್ತು ಹಿಸ್ಸಾ ಮೋಜಣಿ ದಾಖಲೆಯನ್ನು ನಿಆರ್–59 ಎಂದು ಮತ್ತು ಆಕಾರ ಬಂದ್ ದಾಖಲೆಯನ್ನು ನಿಆರ್–60 ಎಂದು ಗುರುತಿಸಿದೆ.

35. W.P 10200/2024 ಪ್ರಕರಣದ ಆದೇಶದ ಹಾಳೆಯನ್ನು ನಿಆರ್–61 ಎಂದು ಗುರುತಿಸಿದೆ.

**ಸೂಚನೆ** – ನಿಆರ್–42 ರಿಂದ ನಿಆರ್–61 ಎಂದು ಗುರುತು ಆದ ಎಲ್ಲಾ ದಾಖಲೆಗಳು ಬೇರೆ ಪ್ರಕರಣದಿಂದ ಪಡೆದುಕೊಂಡಿರುವಂತಹ ಧೃಡೀಕೃತ ನಕಲುಗಳು ಆಗಿವೆ.

ಆದಕಾರಣದಿಂದ ಪ್ರಾರ್ಥನೆಯಂತೆ ಈ ಪ್ರಕರಣದಲ್ಲಿ ಇರುವ ಪರಿಹಾರದ ಹಣದಲ್ಲಿ ನನ್ನ ಬಾಬ್ತು ಹಣವನ್ನು ನನಗೆ ಕೊಡಬೇಕು ಎಂದು ಪ್ರಾರ್ಥಿಸುತ್ತೇನೆ.

**ಪಾಟೀಸವಾಲು** – ಕೋರಿಕೆ ಮೇರೆಗೆ ಮುಂದೂಡಿದೆ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ.